ಅಮೇರಿಕಾದ ಬಾಸ್ಟನ್ ನಲ್ಲಿ ನ್ಯೂ ಇಂಗ್ಲೆಂಡ್ ತುಳು ಕೂಟದ ಪ್ರಥಮ ವಾರ್ಷಿಕ ಸಮಾರಂಭ



ಪ್ರಭಾಕರ ಭಟ್, ಬಾಸ್ಟನ್, ಅಮೇರಿಕ



ತುಳುನಾಡಿನಲ್ಲಿದ್ದಷ್ಟು ಕಲೆ, ಊಟ, ತಿಂಡಿ, ಭಾಷೆ. ಜಾತಿ, ಮತಗಳ ವೈವಿಧ್ಯತೆಯ ಒಂದುಗೂಡುವಿಕೆ ಇನ್ನೊಂದು ಊರಲ್ಲಿ ಕಾಣಸಿಗುವುದು ಅಸದಳ. ಸಪ್ತಸಾಗರದಾಚೆ ವಾಸವಾಗಿದ್ದರೂ ತಾಯ್ನಾಡಿನ ಈ ಸವಿನೆನಪು ಸದಾ ನಮ್ಮಲಿರಲೆಂದು ಅಮೇರಿಕಾದ ಬಾಸ್ಟನ್ ನಗರದ ಪರಿಸರದಲ್ಲಿ ತುಳು ಮೂಲದವರ ಮತ್ತು ತುಳು ಭಾಷಾ ಪ್ರೇಮಿಗಳ ಸಮ್ಮಿಲನಕ್ಕೆ ಸಾಂಘಿಕ ವೇದಿಕೆಯೊಂದನ್ನು ಒದಗಿಸಬೇಕೆಂದು ನಾವು ಕೆಲವು ವರ್ಷಗಳಿಂದ ಹಂಬಲಿಸುತ್ತಿದ್ದೆವು.

ಅದಕ್ಕಾಗಿ, ಒಂದು ವರ್ಷದ ಹಿಂದೆ, ಬಾಸ್ಟನ್ ನಗರದ ಸಮೀಪದ ಹಾಪ್ಕಿನ್ಟನ್ ರಾಜ್ಯೋಪವನದಲ್ಲಿ ನಡೆದ ವನಭೋಜನದ ಕಾರ್ಯಕ್ರಮದಂದು ಸುಧಾಕರ ರಾವ್ ಮತ್ತು ಫ್ರೆಡೆರಿಕ್ ಫೆರ್ನಾಂಡೆಸ್ ಅವರ ನೇತೃತ್ವದಲ್ಲಿ ಬಾಸ್ಟನ್ ನ್ಯೂ ಇಂಗ್ಲೆಂಡ್ ತುಳು ಕೂಟದ ಸ್ಥಾಪನೆಯಾಯಿತು. ಅವರ ಜೊತೆಗೆ ಪೂಜಾ ರೈ ಶೆಟ್ಟಿ, ಪ್ರಭಾಕರ ಭಟ್, ಭಾವನಾ ಜೈನ್, ವಿವೇಕ್ ಹೆಗ್ಡೆ, ಭಾಸ್ಕರ ಶೇರಿಗಾರ್, ಅನೀಶ್ ಪುತ್ತೂರು, ರಘು ಕಿನ್ನಿಗೋಳಿ ಮತ್ತು ಸೂರಜ್ ಶೆಟ್ಟಿ ಕಾರ್ಯಕಾರಿ ಸಮಿತಿಯಲ್ಲಿದ್ದರು. ಅಮೇರಿಕದ ಕನೆಕ್ಟಿಕಟ್, ರೋಡ್ ಐಲ್ಯಾಂಡ್, ಮ್ಯಾಸಚ್ಯೂಸೆಟ್ಸ್, ನ್ಯೂಹ್ಯಾಂಪ್ಶೈರ್, ಮೈನ್ ಮತ್ತು ವೆರ್ಮಾಂಟ್ ಎಂಬ ಆರು ರಾಜ್ಯಗಳ ವಲಯಕ್ಕೆ ನ್ಯೂ ಇಂಗ್ಲೆಂಡ್ ಎಂದು ಹೇಳುತ್ತಾರೆ. ಮ್ಯಾಸಚ್ಯೂಸೆಟ್ಸ್ ರಾಜ್ಯದ ರಾಜ್ಯಧಾನಿ ಬಾಸ್ಟನ್.

ಮೂರು ತಿಂಗಳ ಹಿಂದೆ, ಈ ವರ್ಷದ ಮಾರ್ಚ್ 14 ರಂದು ವಸಂತ ಕಾಲವನ್ನು ಇದಿರುಗೊಳ್ಳಲು "ಸುಗ್ಗಿದ ಕೂಟ"ದ ಕಾರ್ಯಕ್ರಮವನ್ನು ಬಹಳ ಅದ್ದೂರಿಯಿಂದ ನಡೆಸಿದೆವು. ಕೂಟದ ಅಧ್ಯಕ್ಷರಾದ ಸುಧಾಕರ ರಾವ್, ಕಾರ್ಯದರ್ಶಿ ಫ್ರೆಡೆರಿಕ್ ಫೆರ್ನಾಂಡೆಸ್ ಮತ್ತು ಸ್ವಾನ್ಫೋರ್ಡ್ ವಿಶ್ವವಿದ್ಯಾನಿಲಯದ ನಿವೃತ್ತ ಪ್ರೊಫೆಸರ್ ನಾರಾಯಣ ರಾವ್ ಅವರು ದೀಪ ಹಚ್ಚಿ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಆಮೇಲೆ ಶಾಲಿನಿ ಶೆಟ್ಟಿ ಅವರ ಪ್ರಾರ್ಥನೆ ಮತ್ತು ಭಾವನಾ ಜೈನ್ ಅವರ ನಿರೂಪಣೆಯೊಂದಿಗೆ ಗಾನ, ನಾಟ್ಯ, ಕುಣಿತ ಮತ್ತು ಹಾಸ್ಯವೂ ಸೇರಿದ ವಿವಿಧ ಮನರಂಜನೆಯ ಕಾರ್ಯಕ್ರಮಗಳನ್ನು ನಡೆಸಲಾಯಿತು. ರಾಘವೇಂದ್ರ ಕುದ್ರೆತ್ತಾಯರು "ತುಳು ಸ್ವಾರಸ್ಯ"ದ ಕುರಿತು ಚೊಕ್ಕವಾಗಿ

ಭಾಷಣವನ್ನು ಮಾಡಿದರು. “ಕೃಷ್ಣ ಬಾರೋ, ರಂಗ ಬಾರೋ”, “ಮೋಕೆದ ಸಿಂಗಾರಿ”, “ಎಕ್ಕ ಸಕ, ಎಕ್ಕ ಸಕ” ಮೊದಲಾದ ಹಾಡುಗಳು, ಯುವ ತಂಡದ ಮತ್ತು ಮಹಿಳಾ ತಂಡದ ಕುಣಿತಗಳು, ಭರತನಾಟ್ಯ, ಹಾಸ್ಯ, ಸಂಗೀತ, ಪಕ್ಕ ವಾದ್ಯಗಳೊಂದಿಗೆ ವಿವಿಧ ರೀತಿಯ ಕಾರ್ಯಕ್ರಮಗಳು ಪ್ರೇಕ್ಷಕರಿಗೆ ಮನರಂಜನೆಯನ್ನು ಒದಗಿಸಿದವು.

ಆಮೇಲೆ ಜೂನ್ 15, 2015 ರಂದು ಹಾಪ್ಕಿನ್ಟನ್ ರಾಜ್ಯೋಪವನದಲ್ಲಿ ಈ ವರ್ಷದ ವನಭೋಜನದ ಕಾರ್ಯಕ್ರಮವನ್ನು ನಡೆಸಲಾಯಿತು. ವಸಂತ ಕಾಲ ಮುಗಿಯುತ್ತಾ ಬಂದು ಬೇಸಗೆ ಕಾಲ ಸಮೀಪಿಸುತ್ತಿರುವ ಶುಭ್ರ ಹವೆಯ ಆ ದಿನದಂದು ಸುಮಾರು ನೂರು ಮಂದಿ ತುಳು ಭಾಷಾ ಪ್ರೇಮಿಗಳು ಒಟ್ಟು ಸೇರಿದೆವು. ಬಗೆಬಗೆಯ ತಿಂಡಿಗಳನ್ನು ಮೆಲ್ಲುತ್ತಾ ತಾಯ್ನಾಡಿನ ನೆನಪುಗಳನ್ನು ಮೆಲುಕುಹಾಕುತ್ತಾ ಸಾಂಘಟಿಕ ಸಮಾಲೋಚನೆಯೊಂದಿಗೆ ಆಟ, ಊಟ, ಒಡನಾಟಗಳಿಂದ ಹರುಷಗೊಂಡೆವು. ಶುಭ್ರವಾದ ಹವಾಮಾನ, ಸೂರ್ಯ ರಶ್ಮಿಯ ಪ್ರಖರತೆಯನ್ನು ತಟಸ್ಥಗೊಳಿಸುವ ಸಮೀಪದ ಸರೋವರದಿಂದ ಬೀಸುವ ಮಂದ ಮಾರುತದ ತಂಪು ಮತ್ತು ಸುತ್ತಮುತ್ತಲಿನ ಎತ್ತರವಾದ ಮರಗಳ ಹಿನ್ನೆಲೆ ವನಭೋಜನಕ್ಕೆ ಬೇಕಾದ ಪರಿಸರವನ್ನು ಒದಗಿಸಿ ಕೊಟ್ಟವು.

ಈ ವಾರ್ಷಿಕ ವನಭೋಜನದಂದು ಹೊಸ ಕಾರ್ಯಕಾರಿ ಸಮಿತಿಯ ಆಯ್ಕೆಯಾಯಿತು. ಈ ಸಮಿತಿಯಲ್ಲಿ ಮುಂದಿನ ಎರಡು ವರ್ಷದ ಅವಧಿಯ ವರೆಗೆ ಭಾಸ್ಕರ ಶೇರಿಗಾರರು ಅಧ್ಯಕ್ಷರಾಗಿಯೂ, ಪೂಜಾ ರೈ ಶೆಟ್ಟಿ ಕಾರ್ಯದರ್ಶಿಗಳಾಗಿಯೂ, ಶರತ್ ಅಮೀನ್ ಖಜಾಂಚಿಗಳಾಗಿಯೂ, ರಾಘವೇಂದ್ರ ಕುದ್ರೆತ್ತಾಯ, ಸುಧೀರ್ ಪ್ರಭು, ಕೃಷ್ಣಪ್ರಸಾದ ಶೆಟ್ಟಿ, ಅನೀಶ್ ಪುತ್ತೂರು ಮತ್ತು ರಘು ಕಿನ್ನಿಗೋಳಿ ಕಾರ್ಯಕಾರೀ ಸಮಿತಿಯ ಸದಸ್ಯರಾಗಿಯೂ, ಸ್ನೇಹಾ ಶೆಟ್ಟಿ ಯುವಮಂಡಳಿಯ ಸದಸ್ಯರಾಗಿಯೂ ಒಮ್ಮತದಿಂದ ಆಯ್ಕೆಗೊಂಡರು. ತಿಂಡಿ, ತಿನಸು ಮತ್ತು ಭೋಜನದ ನಂತರ ವೋಲ್ಲಿಬಾಲ್, ಕ್ರಿಕೆಟ್, ಲಗೋರಿ ಮೊದಲಾದ ಆಟಗಳನ್ನು ಆಡಿ, ಅಲ್ಲೇ ತಯಾರು ಮಾಡಿದ ಬಿಸಿ ಬಿಸಿ ಗೋಳಿಬಜೆಯನ್ನು ತಿಂದು ಚಹಾಪಾನದೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಈ ಕೂಟದ ಕಾರ್ಯಕ್ರಮಗಳ ಇನ್ನೊಂದು ವಿಶೇಷವೇನೆಂದರೆ ಕೂಟದ ಸದಸ್ಯರೆಲ್ಲ ಅತ್ಯುತ್ಸಾಹದಿಂದ ತಮ್ಮ ತಮ್ಮ ಮನೆಗಳಲ್ಲಿ ಅಡುಗೆ ಮಾಡಿ ತರುವ ಕರಾವಳಿಯ ವಿವಿಧ ತಿಂಡಿ ತಿನಸುಗಳು ಮತ್ತು ಪದಾರ್ಥಗಳು. ಊಟದ ಸಮಯದಲ್ಲಿ ಪದೇ ಪದೇ ಕೇಳಿಬರುತ್ತಿದ್ದ ಮಾತು - “ಊರುದ ನೆನಪ್ ಆಪುಂಡ್”.

ಬಾಸ್ಟನ್ ಪರಿಸರದಲ್ಲಿ ನೂರಕ್ಕೂ ಹೆಚ್ಚಿನ ತುಳುನಾಡಿನ ಮೂಲದ ಕುಟುಂಬಗಳಿವೆ. ಇಲ್ಲಿ ಆರಂಭವಾದ ಈ ತುಳು ಕೂಟದ ಬೆಳಕು ಅಮೇರಿಕಾದ್ಯಂತ ಪಸರಿಸಿ ಪ್ರಜ್ವಲಿಸಲಿ ಎಂದು ನಮ್ಮೆಲ್ಲರ ಹಾರೈಕೆ.

ಈ ಕಾರ್ಯಕ್ರಮಗಳ ವಿವರಗಳನ್ನು ಸುಲಲಿತವಾಗಿ ವರದಿಮಾಡಿದ ಕವಿತಾ ಶೆಟ್ಟಿ ಅವರ ಇಂಗ್ಲಿಷ್ ಲೇಖನಗಳನ್ನೂ, ಅನೀಶ್ ಪುತ್ತೂರು ಅವರು ಸೆರೆಹಿಡಿದ ಸುಂದರವಾದ ಛಾಯಾಚಿತ್ರಗಳನ್ನೂ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ನೋಡಬಹುದು.